**ದಿನಾಂಕಃ 07.07.2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು 2 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಜಿ.ಎಸ್.ಪಿ ರವರಿಂದಃ**

ನಾಯಂಡಹಳ್ಳಿ ಸರ್ವೆ ನಂ.47 ಜಮೀನು ನನ್ನ ತಂದೆಗೆ ಸೇರಿರುತ್ತದೆ ಅವರ ಮರಣ ನಂತರ ಸದರಿ ಜಮೀನಿಗೆ ನಾನು ವಾರಸ್ಸುದಾರನಾಗಿರುತ್ತೇನೆ. ಸರ್ವೆ ನಂ.47 ಜಮೀನು ಒಂದು ಪೊಷನ್ ? ಪ್ರಸ್ತುತ ನನ್ನ ತಂದೆಯ ಹೆಸರಿಗೆ ಖಾತೆ ಇದ್ದು, ಇನ್ನು ಉಳಿಕೆ ನನ್ನ ಮತ್ತು ನನ್ನ ತಮ್ಮನ ಹೆಸರಿಗೆ ಖಾತೆ ಇರುತ್ತದೆ. ಸದರಿ ಸ್ವತ್ತು ನನಗೆ ಮತ್ತು ನನ್ನ ತಮ್ಮನಿಗೆ ವಿಭಾಗ ಪತ್ರದ ಮೂಲಕ ಬಂದಿರುತ್ತದೆ. ನಿಪಿ-6 ವಿಭಾಗ ಪತ್ರದಲ್ಲಿ ಸರ್ವೆ ನಂ.47 ಜಮೀನು ನನ್ನ ಮತ್ತು ನನ್ನ ತಮ್ಮನಿಗೆ ಉಲ್ಲೇಖ ಇರುತ್ತದೆ. ಸರ್ವೆ ನಂ.47 ಜಮೀನು ನನಗೆ ಮತ್ತು ನನ್ನ ತಮ್ಮನಿಗೆ ವಿಭಾಗ ಮೂಲಕ ಬಂದಿರುತ್ತದೆ ಎಂದು ನಿಪಿ-6 ವಿಭಾಗ ಪತ್ರದಲ್ಲಿ ಯಾವುದೇ ಉಲ್ಲೇಖ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ ವಿಭಾಗ ಪತ್ರದಲ್ಲಿ ಸರ್ವೆ ನಂಬರ್ ಇರುವುದಿಲ್ಲ ಆದರೆ ಖಾತೆ ನಂಬರ್ ಇರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ.47 ಜಮೀನು ಮತ್ತು ನಿಪಿ-6 ವಿಭಾಗ ಪತ್ರದಲ್ಲಿ ನಮುದಾಗಿರುವ ಖಾತೆ ಒಂದೇ ಜಮೀನು ಎಂದು ತೋರಿಸಲು ದಾಖಲೆಗಳು ಇರುತ್ತವೇ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಪ್ರಶ್ನೆಃ ನಿಪಿ-**6** ವಿಭಾಗ ಪತ್ರದಲ್ಲಿ ಸರ್ವೆ ನಂ.**47** ಜಮೀನನ್ನು ಖಾತೆ ನಂಬರ್ ಆಗಿ ಬರೆದಿರುವ ಬಗ್ಗೆ ಏನಾದರು ಉಲ್ಲೇಖ ಇರುತ್ತದಯೇ**?**
ಉಃ ಉಲ್ಲೇಖ ಇರುವುದಿಲ್ಲ ಆದರೆ ಚೆಕ್ಕುಬಂದಿ ಇರುತ್ತದೆ.

ಪ್ರಶ್ನೆಃ ನಿಪಿ-**17** ದಾಖಲೆಯಲ್ಲಿ ಇರುವ ಸ್ವತ್ತಿನ ವಿವರವನ್ನು ಹೇಳಲು ಹೇಳಲು ಆಗುತ್ತದೆಯೇ**?**
ಉಃ ಬಿ.ಎಂ.ಡಿ ಖಾತಾ ನಂ.**47/**ಎ**/2** ಮತ್ತು **47/3.**

ನಿಪಿ-**17** ದಾಖಲೆಯಲ್ಲಿ ತೋರಿಸಿರುವ ಸ್ವತ್ತು ನಿಪಿ-**6** ವಿಭಾಗ ಪತ್ರದಲ್ಲಿ ನಮುದಿಸಲಾಗಿರುತ್ತದೆ.

ಪ್ರಶ್ನೆಃ ಬಿ.ಎಂ.ಡಿ ಖಾತಾ ನಂ.**47/**ಎ**/2** ಮತ್ತು **47/3** ಸ್ವತ್ತಿನ ವಿವರ ನಿಪಿ-**6** ವಿಭಾಗ ಪತ್ರದಲ್ಲಿ ಇರುವುದಿಲ್ಲ**?**
ಉಃ ನಿಪಿ-**6** ವಿಭಾಗ ಪತ್ರದಲ್ಲಿ ಖಾತಾ ಸಂಖ್ಯೆಯು ಗ್ರಾಮ ಪಂಚಾಯ್ತಿ ಕಛೇರಿಂದ ಕೊಟ್ಟ ಖಾತಾ ಸಂಖ್ಯೆ ಆಗಿರುತ್ತದೆ.

ಪ್ರಶ್ನೆಃ ನಿಪಿ-**17** ದಾಖಲೆಯಲ್ಲಿ ತೋರಿಸಿರುವ ವಿಸ್ತೀರ್ಣ ಹೇಳಲು ಆಗುತ್ತದೆಯೇ**?**
ಉಃ ಪೂರ್ವ ಪಶ್ಚಿಮ **20** ಅಡಿ, ಉತ್ತರ ದಕ್ಷಿಣ **69** ಅಡಿ. ಅಂದರೆ **1380** ಚದುರ ಅಡಿ ಒಟ್ಟು ವಿಸ್ತೀರ್ಣ ಆಗಿರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿದಿರುತ್ತಾರೆ.

ನಿಪಿ-**17** ದಾಖಲೆಯಲ್ಲಿ ತೋರಿಸಿರುವ ಸ್ವತ್ತು ಸರ್ವೆ ನಂ.**47** ಜಮೀನಿನಲ್ಲಿ ನಿರ್ಮಾಣ ಮಾಡಲಾಗಿರುತ್ತದೆ. ಸಾಕ್ಷಿಗೆ ಈ ಹಂತದಲ್ಲಿ ಸರ್ವೆ ನಂ.**47** ನಾಯಂಡಹಳ್ಳಿ ಸರ್ವೆ ನಂ.**47** ಜಮೀನಿಗೆ ಸಂಬಂಧಿಸಿದ ಪಹಣಿ ಇದು ಆಗಿರುತ್ತದೆಯೇ ಎಂದರೆ ಸಾಕ್ಷಿಯು ಹೌದು ಎಂದು ಹೇಳಿದ ಮೇರೆಗೆ ಸದರಿ ದಾಖಲೆಯನ್ನು ನಿಡಿ-**1** ಎಂದು ಗುರುತಿಸಲಾಯಿತು. ಸರ್ವೆ ನಂ.**47** ಜಮೀನಿ ಒಟ್ಟು ವಿ. **94743** ಚದುರ ಅಡಿ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಒಂದು ಟಿಪ್ಪಣಿ ಕಾಪಿಯನ್ನು ಸಾಕ್ಷಿಗೆ ತೋರಿಸಿ ಸದರಿ ಟಿಪ್ಪಣಿ ಕಾಪಿಯು ಸರ್ವೆ ನಂ.**47** ಜಮೀನಿಗೆ ಸಂಬಂಧಿಸಿದ್ದು ಎಂದರೆ ಸಾಕ್ಷಿಯು ಒಪ್ಪಿಕೊಂಡ ಮೇರೆಗೆ ಅದನ್ನು ನಿಡಿ-**2** ಎಂದು ಗುರುತಿಸಲಾಯಿತು. ನಿಪಿ-**17** ದಾವಾ ಪತ್ರದಲ್ಲಿ ತೋರಿಸಿರುವ ಶೆಡ್ಯೂಲ್ ಸ್ವತ್ತಿನ ವಿವರವು ನಿಡಿ-**2** ಟಿಪ್ಪಣಿಯಲ್ಲಿ ಎಲ್ಲಿ ಬರುತ್ತದೆ ಎಂದು ತೋರಿಸಲು ಆಗುತ್ತದೆಯೇ ಎಂದರೆ ಸಾಕ್ಷಿಯು ಮಶ್ಚಿಮ ದಿಕ್ಕಿಗೆ ಬರುತ್ತದೆ ಎಂದು ಹೇಳುತ್ತಾರೆ. ನಿಪಿ-**17** ದಾವಾ ಪತ್ರದ ಶೆಡ್ಯೂಲ್ ಸ್ವತ್ತು ನಿಡಿ-**2** ಟಿಪ್ಪಣಿಯ ಪರಿವ್ಯಾಪ್ತಿಯಲ್ಲಿ ಬರುತ್ತದೆ.

ಪ್ರಶ್ನೆಃ ನಿಪಿ-**17** ದಾವಾ ಪತ್ರದಲ್ಲಿ ತೋರಿಸಿರುವ ಶೆಡ್ಯೂಲ್ ಸ್ವತ್ತಿನ ವಿವರವನ್ನು ನಿಡಿ-**2** ಟಿಪ್ಪಣಿಯಲ್ಲಿ ತೋರ್ ಪಡಿಸಲು ನ್ಯಾಯಾಲಯದಿಂದ ನಿಯೋಗಿಯನ್ನು ನೇಮಕ ಮಾಡಲು ನಿಮ್ಮ ತಕರಾರು ಇರುತ್ತದೆಯೇ**?**

ಉಃ **2** ನೇ ಪ್ರತಿವಾದಿಯು ದಾವಾ ಶೆಡ್ಯೂಲ್ ಸ್ವತ್ತು ವಾದಿಗಳಿಗೆ ಸೇರಿದ ಸ್ವತ್ತು ಎಂದು ಒಪ್ಪಿಕೊಂಡ ಮೇರೆಗೆ ನ್ಯಾಯಾಲಯದಿಂದ

**ನಿಯೋಗಿಯನ್ನು ನೇಮಕ ಮಾಡುವ ಯಾವುದೇ ಅಗತ್ಯೆತೆ ಕಂಡುಬರುವುದಿಲ್ಲ ಎಂದು ನುಡಿಯುತ್ತಾರೆ.**

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿರುತ್ತಾರೆ ಕಾಲವಕಾಶ ನೀಡಿಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು)

**ಓ. ಹೇ.ಕೇ.ಸ.ಇದೆ.**

**(ಓಂಕಾರಪ್ಪ. ಆರ್.)**
**5** ನೇ ಅ.ನ.ಸಿ.ಸಿ. ನ್ಯಾಯಾಧೀಶರು,
ಬೆಂಗಳೂರು ನಗರ.